ಡಿ.ಡಬ್ಲೂ-1

**<u>ದಿಃ 31.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಡಿ.ಎಸ್.ಎ ವಕೀಲರಿಂದಃ</u>**

**<u>ವಾದಿಯರ ಪರವಾಗಿಃ</u>**

20). ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಮತ್ತು ಇಂಗ್ಲೀಷ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಜನ್ಮ ದಿನಾಂಕಃ 12.04.1962 ನೇ ಇಸ್ವಿ ಆಗಿರುತ್ತದೆ. ನಾನು ಎಸ್.ಎಸ್.ಎಲ್.ಸಿ ಯಾವ ಇಸ್ವಿಯಲ್ಲಿ ತೇರ್ಗಡೆಯಾಗಿರುತ್ತೇನೆ ಎಂದು ನನಗೆ ನೆನಪಿಲ್ಲ. ಅದೇ ರೀತಿ ನಾನು ಪಿ.ಯು.ಸಿ ಯಲ್ಲಿ ಯಾವ ವರ್ಷ ತೇರ್ಗಡೆಯಾಗಿರುತ್ತೇನೆ ಎಂದು ನನಗೆ ನೆನಪಿಲ್ಲ. ನನ್ನ ಮದುವೆ ದಿನಾಂಕಃ 28.01.1988 ರಂದು ಆಗಿರುತ್ತದೆ. ನಾನು ಪಿ.ಯು.ಸಿ ತೇರ್ಗಡೆಯಾಗಿದ ನಂತರ ಎಷ್ಟು ವರ್ಷಗಳ ನಂತರ ನನ್ನ ಮದುವೆಯಾಗಿರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ. ನಾನು ಪಿ.ಯು.ಸಿ ಮುಗಿದ ನಂತರ ಎಷ್ಟು ವರ್ಷ ನನ್ನ ತವರು ಮನೆಯಲ್ಲಿ ಇದ್ದೆ ಎಂದು ಹೇಳಲು ಆಗುವದಿಲ್ಲ.

21) ನಾನು ಪಿ.ಯು.ಸಿ ತೇರ್ಗಡೆಯಾದ ನಂತರ ಯಾವುದೇ ಕೋರ್ಸಗಳನ್ನು ಮುಂದುವರೆದು ಮಾಡಿರುವದಿಲ್ಲ. ನಾನು ಟೇಲರಿಂಗ ಮಾಡುವ ಕುರಿತಾಗಿ ಯಾವುದೇ ಇನಸ್ಟಿಟ್ಯೂಟ್ ನಿಂದ ತೇರ್ಗಡೆ ಪತ್ರವನ್ನು ಪಡೆದಿರುವದಿಲ್ಲ. ನಾನು ಟೇಲರಿಂಗ ಮಾಡುತ್ತೇನೆ ಎನ್ನುವ ಕುರಿತಾಗಿ ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಾನು ಮದುವೆಯಾಗಿ ಗಂಡನ ಮನೆಗೆ ಬಂದ ನಂತರ ನನ್ನ

ಗಂಡನ ಮನೆಯಲ್ಲಿ 1 ನೇ ತರಗತಿಯಿಂದ 6 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಟ್ಯೂಶನ ಕ್ಲಾಸ ತೆಗೆದುಕೊಳ್ಳುತ್ತಿದ್ದೆ. ಸದರಿ ಟ್ಯೂಷನಕ್ಲಾಸಗಳನ್ನು ಕನ್ನಡ ತರಗತಿ ವಿದ್ಯಾರ್ಥಿಗಳಿಗೆ ತೆಗೆದುಕೊಳ್ಳುತ್ತಿದೆ. ನಾನು ಟ್ಯೂಷನ ಕ್ಲಾಸ ತೆಗೆದುಕೊಳ್ಳುವ ಕುರಿತಾಗಿ ನನ್ನ ಗಂಡನ ಮನೆಯು ಮುಂದೆ ಯಾವುದೇ ಬೋರ್ಡ ಹಾಕಿರುವದಿಲ್ಲ. ನಾನು ನನ್ನ ಗಂಡನ ಮನೆಯಲ್ಲಿ ಒಟ್ಟು 8 ಜನ ವಿದ್ಯಾರ್ಥಿಗಳಿಗೆ ಟ್ಯೂಷನ ಕ್ಲಾಸ ಹೇಳಿಕೊಡುತ್ತಿದ್ದೆ. ನಾನು ನನ್ನ ಗಂಡನ ಮನೆಯಲ್ಲಿ ಮಕ್ಕಳಿಗೆ ಟ್ಯೂಷನ ಕ್ಲಾಸನ್ನು 1988 ನೇ ಇಸ್ವಿಯಿಂದ 1997 ನೇ ಇಸ್ವಿಯವರೆಗೆ ತೆಗೆದುಕೊಂಡಿರುತ್ತೇನೆ. ನಾನು ಸದರಿ ಟ್ಯೂಷನ ಕ್ಲಾಸನಲ್ಲಿ ವಿದ್ಯಾರ್ಥಿಗಳಿಗೆ ನಾನು ಕನ್ನಡ ಮತ್ತು ಸಾಮಾಜಿಕ ವಿಜ್ಞಾನ ಪಠ್ಯದ ಕುರಿತಾಗಿ ಟ್ಯೂಷನ ಕ್ಲಾಸ ಹೇಳಿ ಕೊಡುತ್ತಿದ್ದೆ. ಕನ್ನಡ ಮತ್ತು ಸಾಮಾಜಿಕ ವಿಜ್ಞಾನ ಯಾವುದೇ ವಿದ್ಯಾರ್ಥಿಗಳಿಗೆ ಕಠಿಣ ಆಗಿರುವದಿಲ್ಲ ಆದ್ದರಿಂದ ಯಾವುದೇ ವಿಧ್ಯರ್ಥಿಗಳು ಕನ್ನಡ ಮತ್ತು ಸಾಮಾಜಿಕ ವಿಜ್ಞಾನ ಪಠ್ಯದ ಟ್ಯೂಷನ ತೆಗೆದುಕೊಳ್ಳುವದಿಲ್ಲ ಅಂದರೆ ಸರಿಯಲ್ಲ. 1 ರಿಂದ 6 ನೇ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಸಾಮಾಜಿಕ ವಿಜ್ಞಾನ ಪಠ್ಯದ ಕುರಿತಾಗಿ ಪ್ರತ್ಯೇಕವಾಗಿ ಇರುವದಿಲ್ಲ ಅಂದರೆ ಸರಿಯಲ್ಲ. ನಾನು ಟ್ಯೂಷನ ಕ್ಲಾಸ ಹೇಳಿ ಕೊಡುವಾಗ ಒಬ್ಬ ವಿದ್ಯಾರ್ಥಿಯಿಂದ ರೂ.75 ರಿಂದ ರೂ.100/- ರವರೆಗೆ ಫೀಯನ್ನು ತೆಗೆದುಕೊಳ್ಳುತ್ತಿದ್ದೆ.

22) ನಾನು 1 ರಿಂದ 6 ನೇ ತರಗತಿಯವರೆಗೆ ಟ್ಯೂಷನ ಹೇಳುವದರಿಂದ ಒಟ್ಟು 700 ರಿಂದ 800 ಆಗುತ್ತಿತ್ತು. ಸದರಿ ರೂ.800/- ಗಳನ್ನು ಬ್ಯಾಂಕಿನಲ್ಲಿ ಕೂಡಿಟ್ಟ ಬಗ್ಗೆ ಈ ಪ್ರಕರಣದಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಾನು ಹೆಣ್ಣುಮಕ್ಕಳಿಗೆ

ಸಂಬಂದಪಟ್ಟ ಬಟ್ಟೆಗಳನ್ನು ಹೊಲಿದುಕೊಡುವ ಕುರಿತಾಗಿ ಟೇಲರಿಂಗ ಕೆಲಸವನ್ನು ಮಾಡುತ್ತಿದ್ದೇನೆ. ನಾನು ಟೇಲರಿಂಗನಲ್ಲಿ ಹೆಣ್ಣುಮಕ್ಕಳಿಗೆ ಸಂಬಂದಪಟ್ಟ ಬಟ್ಟೆಗಳ ಕುರಿತಾಗಿ ಟೇಲರಿಂಗ ಕೆಲಸ ಮಾಡುತ್ತಿದ್ದೆ. ಅದರಲ್ಲಿ ನಾನು ಟೇಲರಿಂಗ ಕೆಲಸ ಮಾಡುವ ಕುರಿತಾಗಿ ಪ್ರತ್ಯೇಕವಾಗಿ ಅಂಗಡಿಯನ್ನು ತೆಗೆದು ಅಲ್ಲಿ ಟೇಲರಿಂಗ ಕೆಲಸ ಮಾಡುತ್ತಿರಲಿಲ್ಲ. ನಾನು ಟೇಲರಿಂಗ ಕೆಲಸ ಮಾಡುವ ಬಗ್ಗೆ ಪ್ರತ್ಯೇಕವಾಗಿ ಅಂಗಡಿ ಮಾಡಿ ಅಲ್ಲಿ ಬೋರ್ಡ ಹಾಕಿ ಜಿ.ಎಸ್.ಟಿ ನಂಬರ ತೆಗೆದುಕೊಂಡು ಅಲ್ಲಿ ಬೋರ್ಡನ್ನು ಹಾಕಿರುವದಿಲ್ಲ. ನಾನು ಟೇಲರಿಂಗ ಕೆಲಸ ಮಾಡುವ ಕುರಿತಾಗಿ ಸಂಬಂದಪಟ್ಟ ನಗರಸಭೆಯಿಂದ ಯಾವುದೇ ಪರವಾನಿಗೆಯನ್ನು ಪಡೆದಿರುವದಿಲ್ಲ.

23) ನಾನು ಟೇಲರಿಂಗ ಮಾಡುವ ಕುರಿತಾಗಿ ಅದಕ್ಕೆ ಸಂಬಂದಪಟ್ಟ ಯಾವುದೇ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಅಂದರೆ ಸರಿ. ನಾನು ಟೇಲರಿಂಗ ಕೆಲಸ ಮಾಡುವಾಗ ಒಂದು ಬೌಸಗಳನ್ನು ಮತ್ತು ಇನ್ನಿತರೆ ಹೆಣ್ಣುಮಕ್ಕಳಿಗೆ ಸಂಬಂದಪಟ್ಟ ಬಟ್ಟೆಗಳನ್ನು ರಿಪೇರಿ ಕೆಲಸ ಮಾಡುತ್ತಿದ್ದೆ. ಈಗ ನಾನು ಟೇಲರಿಂಗ ಕೆಲಸ ಮಾಡುತ್ತಿರುವದಿಲ್ಲ. ನಾನು ಟೇಲರಿಂಗ ಕೆಲಸ ಮಾಡುವಾಗ ಒಂದು ಬೌಸ ಹೊಲಿದು ಕೊಟ್ಟರೆ ರೂ.50/- ತೆಗೆದುಕೊಳ್ಳುತ್ತಿದೆ. ಟೇಲರಿಂಗ ಕೆಲಸ ಮಾಡಿ ಅದರಿಂದ ಬಂದಂತಹ ಹಣವನ್ನು ಬ್ಯಾಂಕಿನಲ್ಲಿ ಕೂಡಿಟ್ಟ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ.

24) 1988 ನೇ ಇಸ್ವಿಯಲ್ಲಿ ನಾನು ಮದುವೆಯಾದಾಗ 4 ಜನ ತಮ್ಮಂದಿರು ಹಾಗೂ ಒಬ್ಬಳು ಸಹೋದರಿ ಇದ್ದಳು. ನಾನು 1988 ನೇ ಇಸ್ವಿಯಲ್ಲಿ ಮದುವೆಯಾದ ನಂತರ ನಾವೆಲ್ಲರೂ ಡಿಸೆಂಬರ 1998 ನೇ ಇಸ್ವಿಯವರೆಗೆ ಎಲ್ಲರೂ ಕೂಡಿಯೇ ಇದ್ದೇವು. 1988 ನೇ ಇಸ್ವಿಯಲ್ಲಿ

ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಬಂದಾಗ ನನ್ನ ಗಂಡನ ಮನೆಯಲ್ಲಿ ಆತನು ಹಿರಿಯ ಮಗನಾಗಿದ್ದರಿಂದ ಆತನು ನನ್ನ ಗಂಡನ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅಂದರೆ ಸರಿ. 1988 ನೇ ಇಸ್ವಿಯಲ್ಲಿ ನನ್ನ ಮದುವೆಯಾದಾಗ ನನ್ನ ಗಂಡನ ಸಹೋದರನಾದ ರಮೇಶ ಈತನನ್ನು ಹೊರತುಪಡಿಸಿ ಉಳಿದ ಎಲ್ಲರೂ ಸಹ ಒಟ್ಟಾಗಿ ವಾಸಿಸುತ್ತಿದ್ದೇವು. 1988 ನೇ ಇಸ್ವಿಯಲ್ಲಿ ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಹೋದಾಗ ರಮೇಶ ಈತನ ಮದುವೆಯಾಗಿರಲಿಲ್ಲ. 1988 ನೇ ಇಸ್ವಿಯಲ್ಲಿ ನಾವು ಮದುವೆಯಾಗಿ ನನ್ನ ಗಂಡನ ಮನೆಗೆ ಹೋದಾಗ ನನ್ನ ಗಂಡನ ಸಹೋದರನಾದ ರಮೇಶ ಈತನು ನಮ್ಮ ಜೊತೆ ವಾಸಿಸುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮದುವೆಯಾದ ವರ್ಷದಲ್ಲಿ ರಮೇಶ ಈತನ ಮದುವೆಯಾಗದೇ ಇರುವದರಿಂದ ಈತನು ಪ್ರತ್ಯೇಕವಾಗಿ ವಾಸಿಸುವ ಸಂದರ್ಭ ಬರುವದಿಲ್ಲ ಅಂದರೆ ಸರಿಯಲ್ಲ.

25) ನನ್ನ ಮದುವೆಯಾದಾಗ ನನ್ನ ಗಂಡ ರೆಡಿಯೋ ರಿಪೇರಿ ಮತ್ತು ಟೇಪರೆಕಾರ್ಡರ ರಿಪೇರಿ ಮಾಡುತ್ತಿದ್ದನು, ಆತನ ಉಳಿದ ಸಹೋದರರು ವಾಚ್ ರಿಪೇರಿ ಅಂಗಡಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಬಂದಾಗ ನನ್ನ ಗಂಡನ ಉಳಿದ ಸಹೋದರರ ಮದುವೆಯಾಗಿಲ್ಲ ಅಂದರೆ ಸರಿ. ನನ್ನ ಮದುವೆಯಾದಾಗ ನನ್ನ ಗಂಡನ ಸಹೋದರರು ವಾಚ್ ರಿಪೇರಿ ಕೆಲಸ ಮಾಡಿ ಬಂದಂತಹ ಹಣವನ್ನು ನನ್ನ ಗಂಡನ ಕೈಯಲ್ಲಿ ಕೊಡುತ್ತಿದ್ದರು ಅಂದರೆ ಸರಿಯಲ್ಲ, ಆದರೆ ಸದರಿ ಹಣವನ್ನು ಅವರ ತಾಯಿಯ ಬಳಿ ಕೊಡುತ್ತಿದ್ದರು.  ನನ್ನ ಗಂಡನು ಬಿ.ಕಾಂ ಪದವಿದರನಾಗಿದ್ದನು. ನನ್ನ ಗಂಡನ

ಎಲ್ಲ ಸಹೋದರರರು ತಾವು ದುಡಿದು ಬಂದಂತಹ ಹಣವನ್ನು ನನ್ನ ಗಂಡನ ಬಳಿ ಕೊಡುತ್ತಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಆ ವಿಷಯದ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಗಂಡನ ಸಹೋದರರಲ್ಲಿ ಇಬ್ಬರ ಮದುವೆಯು 1992-93 ನೇ ಇಸ್ವಿಯಲ್ಲಿ ಆಗಿರುತ್ತದೆ. ಇನ್ನು ಉಳಿದ ಇಬ್ಬರೂ ಸಹೋದರರ ಮದುವೆಯು 1996 ನೇ ಇಸ್ವಿಯಲ್ಲಿ ಆಗಿರುತ್ತದೆ. ನಾನು 1998 ನೇ ಇಸ್ವಿಯಲ್ಲಿ ನಾನು ಮತ್ತು ನನ್ನ ಗಂಡ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ವಾಸಿಸಿಕೊಂಡು ಬರುತ್ತಿದ್ದೇವೆ ಅಂದರೆ ಸರಿ. 1998 ರವರೆಗೆ ನನ್ನ ಗಂಡ ಹಾಗೂ ಆತನ ಸಹೋದರ ಸತೀಶ ಇಬ್ಬರೂ ಸೇರಿ ನಮ್ಮ ಒಟ್ಟು ಕುಟುಂಬದ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಿದ್ದರು.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಲಾಗಿ, ಅವಕಾಶ ಕೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.